**ದಿನಾಂಕಃ 11.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಈಗಲೂ ನೀವು ಗಾರೆ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಈ ಮೊದಲು ನಾಗರಾಜು ಎಂಬುವವರ ಮೇಸ್ತ್ರಿ ಬಳಿ ಕೆಲಸ ಮಾಡುತ್ತಿದ್ದೇನೆ. ನಾನು ಕೋಲಾರ ಜಿಲ್ಲೆಯ ಕೊಂಗನೂರು ಗ್ರಾಮದ ಪ್ರಗತಿ ಗ್ರಾಮೀಣ ಬ್ಯಾಂಕಿನಲ್ಲಿ ಖಾತೆದಾರನಾಗಿರುತ್ತೇನೆ. ಬ್ಯಾಂಕಿನ ಪಾಸ್ ಪುಸ್ತಕವನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ಮೇಸ್ತ್ರಿಯಿಂದ ನಗದಾಗಿ ಕೂಲಿ ಪಡೆದುಕೊಳ್ಳುತ್ತಿದ್ದೆನು. ನಾನು ತಿಂಗಳಿಗೆ 30 ಸಾವಿರ ರೂ. ಸಂಪಾದಿಸುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾಗುವ ಮೊದಲು ಹೇಗೆ ಚೆನ್ನಾಗಿದ್ದಿರೋ ಹಾಗೆಯೇ ಈಗಲೂ ಸಹ ಇದ್ದೀರಿ ಎಂದರೆ ಸರಿಯಲ್ಲ.

**2.** ಅಪಘಾತವಾದ ಸ್ಥಳದ ಎರಡು ಬಸ್ಸುಗಳು ಸರಾಗವಾಗಿ ಚಲಿಸುವಂತಹ ರಸ್ತೆಯಾಗಿತ್ತು. ರಸ್ತೆಯಲ್ಲಿ ವಿಭಜಕವಿರಲಿಲ್ಲ. ರಸ್ತೆಯ ಎರಡು ಬದಿಗಳಲ್ಲಿ 2 ರಿಂದ 3 ಅಡಿ ಮಣ್ಣಿನ ಕಾಲು ದಾರಿ ಇದೆ. ಮಣ್ಣಿನ ರಸ್ತೆ ಟಾರು ರಸ್ತೆಗಿಂತ ಕೆಳಭಾಗದಲ್ಲಿದೆ. ರಸ್ತೆ ದಾಟುವ ಸಂದರ್ಭದಲ್ಲಿ ಅಪಘಾತವಾಗಿದೆ ಎಂದರೆ ಸರಿಯಲ್ಲ, ನಾನು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದೆನು, ಆಗ ಅಪಘಾತವಾಯಿತು. ಪೊಲೀಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದಿರುತ್ತಾರೆ. ನಿ.ಪಿ.4 ರಲ್ಲಿ ಅಪಘಾತವಾದ ಸ್ಥಳವನ್ನು ರಸ್ತೆಯ ಮಧ್ಯಭಾಗದಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ನೀವು ರಸ್ತೆಯ ಮಧ್ಯಭಾಗದಲ್ಲಿ ಅಡ್ಡಾದಿಡ್ಡಿಯಾಗಿ ನಡೆದುಕೊಂಡು ಹೋಗುತ್ತಿದ್ದ ಕಾರಣ ನಿಮ್ಮ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ

ಸರಿಯಲ್ಲ. ನಿ.ಪಿ.4 ರಲ್ಲಿ ಪಾದಚಾರಿ ರಸ್ತೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಸ್ಥಳದಲ್ಲಿ ಪಾದಚಾರಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದಲ್ಲಿ ರಸ್ತೆ ದಾಟಲು ಜೀಬ್ರಾ ಕ್ರಾಸಿಂಗ್ ಹಾಕಿರಲಿಲ್ಲ. ಅಪಘಾತ ಸ್ಥಳದ ರಸ್ತೆಯಲ್ಲಿ ಹೆಚ್ಚಿನ ವಾಹನ ಸಂಚಾರ ಇರುವುದಿಲ್ಲ ಎಂದರೆ ಸರಿ. ಅಪಘಾತದ ರಸ್ತೆಯು ಏರು ಪೇರು ಮತ್ತು ಹಳ್ಳದಿಂದ ಕೂಡಿರುತ್ತದೆ ಎಂದರೆ ಸರಿ. ಯಾವುದೇ ವಾಹನ ವೇಗವಾಗಿ ಹೋಗಲು ಸಾಧ್ಯವಾಗುವುದಿಲ್ಲ ಎಂದರೆ ಸರಿ.

**ಮಧ್ಯಾಹ್ನ 2.00 ಗಂಟೆ ಸಮಯವಾದ ಕಾರಣ ಮುಂದುವರೆದು ಪಾಟೀ ಸವಾಲನ್ನು 3.00 ಗಂಟೆಗೆ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.

**ದಿನಾಂಕ: 11.08.2025 ರಂದು ಮಧ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದ:**

**3.** ಅಪಘಾತವಾದ ನಂತರ ನನಗೆ ಪ್ರಜ್ಞೆ ತಪ್ಪಿತ್ತು, ನ್ಯೂ ಲೈಫ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುವಾಗ 20 ದಿನಗಳ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ನಿಮ್ಮನ್ನು ಯಾರು

ಆಸ್ಪತ್ರೆಗೆ ದಾಖಲಿಸಿದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರಜ್ಞೆ ಬಂದ ನಂತರ ವೈದ್ಯರು ಅಪಘಾತದ ಬಗ್ಗೆ ನನ್ನನ್ನು ಕೇಳಿ ನನ್ನಿಂದ ಮಾಹಿತಿ ಪಡೆದುಕೊಂಡಿರುತ್ತಾರೆ. ಆ ರೀತಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು ಎಂದರೆ ಸರಿ. ನಿಮ್ಮದೇ ತಪ್ಪಿನಿಂದ ಅಪಘಾತವಾಗಿದ್ದರೂ ಪೊಲೀಸರೊಂದಿಗೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

**4.** ನನ್ನ ಹೊಟ್ಟೆ ಹಾಗೂ ಎಡಭುಜ ಹಾಗೂ ಎಡ ಕೆನ್ನೆಗೆ ಶಸ್ತ್ರ ಚಿಕಿತ್ಸೆಯಾಗಿದ್ದು ಎಡಭುಜಕ್ಕೆ ರಾಡನ್ನು ಅಳವಡಿಸಿದ್ದು, ಎಡ ಕೆನ್ನೆಗೆ ಪ್ಲೇಟನ್ನು ಅಳವಡಿಸಿದ್ದಾರೆ. ಒಳಜೋಡಣೆ ಇನ್ನು ಹಾಗೆಯೇ ಇದೆ. ಒಳಜೋಡಣೆಯನ್ನು ತೆಗೆಯಬಹುದು ಎಂದು ವೈದ್ಯರು ತಿಳಿಸಿರುತ್ತಾರೆ. ಮೊದಲಿನಂತೆ ಸಂಪೂರ್ಣವಾಗಿ ಗುಣಮುಖ ಹೊಂದಿರುತ್ತೀರಿ ಎಂದರೆ ಸರಿಯಲ್ಲ. ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿರುತ್ತದೆ ಎಂದರೆ ಸರಿ. ಒಳಜೋಡಣೆಯನ್ನು ತೆಗೆಯುವುದನ್ನು ಹೊರತುಪಡಿಸಿ ಬೇರೆ ಶಸ್ತ್ರ ಚಿಕಿತ್ಸೆಯ ಅಗತ್ಯವಿರುವುದಿಲ್ಲ ಎಂದು ವೈದ್ಯರು ತಿಳಿಸಿರುತ್ತಾರೆ. ನಾನು ಸೃಷ್ಟಿ ಮಾಡಿ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಗ್ಯ ವಿಮಾ ಪಾಲಿಸಿಯನ್ನು ಪಡೆದುಕೊಂಡಿರುವುದಿಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿರುವುದಿಲ್ಲ. ಚಿಕಿತ್ಸೆ ನೀಡಿದಂತಹ ವೈದ್ಯರು ನ್ಯಾಯಾಲಯಕ್ಕೆ ಹಾಜರುಪಡಿಸಿ ಸಾಕ್ಷಿ ನುಡಿಯುತ್ತೀರಿ ಎಂದರೆ ಸರಿ. ಪರಿಹಾರಕ್ಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾಗುವ ಮೊದಲು ಯಾವ ರೀತಿ ದೈಹಿಕವಾಗಿ ಚೆನ್ನಾಗಿದ್ದಿರೋ ಈಗಲೂ ಸಹ ಅದೇ ರೀತಿ ಇದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.